**ಸುದ್ದಿ ಸಂಚಯ**







# ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ವಾರ್ಷಿಕೋತ್ಸವ

ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ೨೦೧೭ನೇ ಸಾಲಿನ ವಾರ್ಷಿಕೋತ್ಸವವು ಫೆಬ್ರುವರಿ ೧೪ರಿಂದ ೧೭ರ ವರೆಗೆ ನಡೆದು, ೧೮ರಂದು **ಶ್ರೀರಾಮಕೃಷ್ಣರ ಜನ್ಮದಿನೋತ್ಸವದೊಂದಿಗೆ** ಕೊನೆಗೊಂಡಿತು. ಯುವಶಿಬಿರ, ಭಕ್ತಸಮ್ಮೇಳನ ಹಾಗೂ ನಾರಾಯಣ ಸೇವೆ ಕಾರ್ಯಕ್ರಮಗಳೊಂದಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆದಿರುವುದು ಈ ಬಾರಿಯ ವಿಶೇಷವಾಗಿದೆ.

ಫೆಬ್ರುವರಿ ೧೪, **ಮಹಾಶಿವರಾತ್ರಿ:** ಶಿವರಾತ್ರಿ ಆಚರಣೆಯ ಅಂಗವಾಗಿ **‘ಗಿರಿಜಾಕಲ್ಯಾಣ’** ಎಂಬ ಸಂಗೀತರೂಪಕವನ್ನು ಶ್ರೀಮತಿ ವಾಣಿ ವಾದಿರಾಜ್ ಹಾಗೂ ವೃಂದದವರು ನಡೆಸಿಕೊಟ್ಟರು.

ಫೆಬ್ರುವರಿ ೧೫, **‘ಸ್ವಾಮಿ ವಿವೇಕಾನಂದರ ದಿನ’:** ಫೆಬ್ರುವರಿ ೧೫ರಂದು ನಡೆದ **ಯುವಶಿಬಿರದಲ್ಲಿ** ಸ್ವಾಮಿ ಅನುಪಮಾನಂದಜಿ ಹಾಗೂ ಶ್ರೀ ಚಕ್ರವರ್ತಿ ಸೂಲಿಬೆಲೆ ಉಪನ್ಯಾಸಗಳನ್ನು ನೀಡಿದರು. ಸಾಯಂಕಾಲ ಚೆನ್ನೈ **ರಾಮಕೃಷ್ಣ ಹರಿಭಜನ ಮಂಡಳಿಯ** ಸದಸ್ಯರಿಂದ ವಿಶೇಷ ಭಜನೆಯ ಕಾರ್ಯಕ್ರಮ ನಡೆಯಿತು.

ಫೆಬ್ರುವರಿ ೧೫, **‘ಶ್ರೀಮಾತೆ ಶಾರದಾದೇವಿ ದಿನ’**: ಈ ದಿನ ನಡೆದ **ಭಕ್ತ ಸಮ್ಮೇಳನದಲ್ಲಿ** ಸ್ವಾಮಿ ಅನುಪಮಾನಂದಜಿ, ಶ್ರೀಮತಿ ಪೋಷಿಣಿ ಉಪನ್ಯಾಸ ನೀಡಿದರು. ಸಾಯಂಕಾಲ ಪಂಡಿತ್ ಶ್ರೀನಾಗರಾಜ್‌ರಾವ್ ಹವಾಲ್ದಾರ್ ಹಾಗೂ ಬಳಗದವರಿಂದ **ಹಿಂದಸ್ತಾನೀ ಶಾಸ್ತ್ರೀಯ ಸಂಗೀತ** ಹಾಗೂ ಭಜನೆಗಳು ನಡೆದವು.

ಫೆಬ್ರುವರಿ ೧೭, **‘ಭಗಿನಿ ನಿವೇದಿತಾ ದಿನ’**: ಈ ದಿನ ೩೦೦ ಮಂದಿ ಮಹಾನಗರ ಪಾಲಿಕೆಯ ನಗರಬಂಧುಗಳಿಗೆ ವಿಶೇಷ ಕಾಣಿಕೆ, ಪೂಜೆ ಸಲ್ಲಿಸುವ ಮೂಲಕ **‘ನಾರಾಯಣ ಸೇವೆ’** ಮಾಡಲಾಯಿತು. ಸ್ವಾಮಿ ನಿತ್ಯಸ್ಥಾನಂದಜಿಯವರು ಆಶೀರ್ವಚನ ನೀಡಿದರು. ಸಾಯಂಕಾಲ ಶ್ರೀ ದತ್ತಾತ್ರೇಯ ವೇಳಂಕರ್ ಅವರಿಂದ **‘ಭಗವಾನ್ ಶ್ರೀರಾಮಕೃಷ್ಣ’** ಎಂಬ ಕಥಾಕೀರ್ತನ ನಡೆಯಿತು.





ಫೆಬ್ರುವರಿ ೧೮, **ಶ್ರೀರಾಮಕೃಷ್ಣ ಜಯಂತಿ :** ಈ ದಿನ ನಡೆದ ಶ್ರೀರಾಮಕೃಷ್ಣರ ಜನ್ಮದಿನೋತ್ಸವದ ಕಾರ್ಯಕ್ರಮದೊಂದಿಗೆ ವಾರ್ಷಿಕೋತ್ಸವವು ಸಂಪೂರ್ಣಗೊಂಡಿತು. ವೇದಮಂತ್ರ , ಭಜನೆ, ವಿಶೇಷಪೂಜೆ, ಹೋಮ, ಪ್ರವಚನಗಳೊಂದಿಗೆ ನಡೆದ ಇಡೀ ದಿನದ ಕಾರ್ಯಕ್ರಮದಲ್ಲಿ ನೂರಾರು ಮಂದಿ ಭಕ್ತರು ಭಾಗವಹಿಸಿದ್ದರು. ಭಕ್ತರಿಗೆ ಮಧ್ಯಾಹ್ನ ಪ್ರಸಾದ ವಿತರಣೆ ನಡೆಯಿತು.







Managing Editor : Swami Atmajnananda    Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020